## **<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ</u>**

**ಮೂಲ ದಾವಾ ನಂ.76/2018**

**ಸಿ.ಡಬ್ಲ್ಯು** 01

ಸಾಕ್ಷಿದಾರರ ಹೆಸರು - **ನಾಗರಾಜ ರಾಮಾ ನಾಯ್ಕ**
ತಂದೆಯ ಹೆಸರು - **ರಾಮಾ ನಾಯ್ಕ**
ವಯಸ್ಸು - 34 ವರ್ಷ
ಉದ್ಯೋಗ - **ತಾಲೂಕಾ ಸರ್ವೆಯರ, ಕುಮಟಾ**
ವಾಸ್ತವ್ಯ - ಕುಮಟಾ

(ಇಂದು ದಿನಾಂಕಃ **25-02-2025** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

### **ಪ್ರಮಾಣೀಕೃತ ಹೇಳಿಕೆ**

**ದಿಃ 16/08/2023 ರಂದು** ಈ ಪ್ರಕರಣದ ಕಡತವನ್ನು ಕಛೇರಿಯಿಂದ ಪಡೆದುಕೊಂಡು ವಾದಿ ಹಾಗೂ ಪ್ರತಿವಾದಿಯರಿಗೆ ದಿಃ 29/08/2023 ರಂದು ನೋಂದಾಯಿತ ಅಂಚೆಯ ಮೂಲಕ ನೋಟೀಸು ನೀಡಿದ್ದು ದಾವಾ ಸ್ಥಳಕ್ಕೆ ಬರಲು ತಿಳಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಯು **ನೋಟೀಸ ಆಗಿದ್ದು**, ಅದನ್ನು **ನಿ.ಸಿ.1 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.1ಎ ಎಂದು** ಗುರುತಿಸಲಾಯಿತು.

ಸಾಕ್ಷಿಯು ಎರಡು ಅಂಚೆ ರಸೀದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ **ನಿ.ಸಿ.2 ಎಂದು ಗುರುತಿಸಲಾಯಿತು.**

ದಿಃ 04/09/2023 ರಂದು ಮೂರೂರು ಗ್ರಾಮದ ಸರ್ವೆ ನಂ. 188/1, 2 ಸ್ಥಳಕ್ಕೆ ಹಾಜರಾಗಿ ಸ್ಥಳದಲ್ಲಿ ಹಾಜರ ಇದ್ದ ವಾದಿ ಹಾಗೂ ಪ್ರತಿವಾದಿಯರಿಗೆ ಮಾನ್ಯ ನ್ಯಾಯಾಲಯದಿಂದ ನೀಡಿದ Memo of Instruction ನ್ನು ಓದಿ ಹೇಳಲಾಗಿ ಸದ್ರಿ ಜಮೀನನ್ನು ಸುತ್ತುವರಿದು ನೋಡಲಾಗಿ ಮಾನ್ಯ ನ್ಯಾಯಾಲಯದ ಆದೇಶದಂತೆ 188/1/2 ನ್ನು ವಾದಿಯರ ಕ್ಷೇತ್ರದ ಗಡಿಯನ್ನು ನಿರ್ಧರಿಸಿರುತ್ತೇನೆ.

ಅದರಂತೆ ಪ್ರತಿವಾದಿಗಳ ಜಾಗ 188/1 ರಲ್ಲಿ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ಪ್ರತಿವಾದಿಗಳ ಜಾಗ 1 ಎಕರೆ 14 ಗುಂಟೆ 9 ಆಣೆ ಆದರೆ ಚಾಲ್ತಿ ಪಹಣಿಯ ಪ್ರಕಾರ ಪ್ರತಿವಾದಿಯ ಶಂಕರ ಶೇಷು ನಾಯ್ಕು ಹಾಗೂ ಸದಾಶಿವ ನಾಗಪ್ಪಾ ನಾಯ್ಕು ರವರಿಗೆ ಕ್ರಯದ ಮೂಲಕ ಅನುಕ್ರಮವಾಗಿ 9 ಗಂಟೆ 8 ಆಣೆ ಹಾಗೂ 10 ಗುಂಟೆ 7 ಆಣೆ ಕ್ರಯಕ್ಕೆ ನೀಡಿರುತ್ತಾರೆ ಹಾಗೂ ಪ್ರತಿವಾದಿಯರು ಪುನಃ ತಮ್ಮ 3 ಹಿಸ್ಸಾಗಳನ್ನಾಗಿ ಪಹಣಿಯನ್ನು ಹೊಂದಿರುತ್ತಾರೆ. ಸದ್ರಿ ಒಟ್ಟೂ ಕ್ಷೇತ್ರ 1 ಎಕರೆ 27 ಗುಂಟೆ ಇದ್ದು, ಸದ್ರಿ ಗಡಿಗಳನ್ನು ನಿರ್ಧರಿಸಿರುತ್ತೇನೆ. ವಾದಿ ಹಾಗಾ ಪ್ರತಿವಾದಿಯವರ ಜಮೀನನ್ನು ಕುಮಟಾದಿಂದ ಮೂರೂರುಗೆ ಹೋಗುವ ಜಮೀನು ಇದ್ದು, ಸದ್ರಿ ಜಾಗವನ್ನು ನಕ್ಷೆಯಲ್ಲಿ ಚುಕ್ಕಿಯಾಗಿ ಗುರುತಿಸಿರುತ್ತೇನೆ.

ಅದರಂತೆ ವಾದಿಯರ ಜಮೀನಿನ ಚೆಕ್ಕುಬಂದಿಯನ್ನು ಸಹ ಸ್ಥಳದಲ್ಲಿ ಸಿಕ್ಕಿದ ಮಾಹಿತಿಯಂತೆ ವರದಿಯಲ್ಲಿ ನಮೂದಿಸಿರುತ್ತೇನೆ.

ಪ್ರತಿವಾದಿಯವರು ಹಾಗೂ ಅವರು ಕ್ರಯಕ್ಕೆ ನೀಡಿದಂತಹ ಜಮೀನುಗಳಲ್ಲಿ ವಾದಿ ಯ ಕ್ಷೇತ್ರ ಅತೀಕ್ರಮಣ ಮಾಡಿರುವ ಜಾಗವನ್ನು ನನ್ನ ವರದಿಯಲ್ಲಿ ಬಣ್ಣವನ್ನು ಮಾಡಿ ತೋರಿಸಿರುತ್ತೇನೆ.

ಆಳತೆ ಕಾಲದಲ್ಲಿ ವಾದಿ ಹಾಗೂ ಪ್ರತಿವಾದಿಗಳ ಜಮಿನು ಉತ್ತರದಿಂದ ದಕ್ಷಿಣ ದಿಕ್ಕಿನಲ್ಲಿ ಇದ್ದು, ಅತ್ಯಂತ ಇಳಿಜಾರು ಹಾಗೂ ಗುಡ್ಡ ಪ್ರದೇಶ ಆಗಿರುವುದರಿಂದ ಹಾಗೂ ಷದ್ರಿ ಜಾಗದಲ್ಲಿ ಎರಡೂ ಕಡೆ ಕುಮಟಾ ಮುರೂರು ರಸ್ತೆಯು ಹಾದು ಹೋಗಿರುವುದರಿಂದ ವಾದಿಯರು ಷದ್ರಿ ಜಮೀನಿನಲ್ಲಿ ಸರ್ವೆ ನಂಬರನ ಮಧ್ಯ ಗುರುತು ಹಾಕಲು ತಿಳಿಸಿರುವುದರಿಂದ ಪುನಃ ಸಂಖ್ಯೆ5, 6 ಹಾಗೂ 7 ರಲ್ಲಿ ಗಡಿಗಳನ್ನು ಗುರುತಿಸಿರುತ್ತೇನೆ.

ಗಡಿ ನಿರ್ಧಾರವಾದ ನಂತರ ಪ್ರತಿವಾದಿಯು ಪಂಚನಾಮೆಗೆ ಸಹಿ ಮಾಡಲು ನಿರಾಕರಿಸಿರುತ್ತಾರೆ. ಷದ್ರಿ ಆಳತೆಯನ್ನು ಪಾಳನಿ ಪದ್ಧತಿಯಿಂದ ಮಾಡಿರುತ್ತೇನೆ. ಷದ್ರಿ ಜಾಗವು ಅತ್ಯಂತ ಇಳಿಜಾರು ಪ್ರದೇಶ ವಾಗಿರುವುದರಿಂದ ಸಮತಲ ಮೇಜು ಮೋಜಣಿ ಸಾಧ್ಯವಾಗಿರುವುದಿಲ್ಲ, ಹಾಗೆಯೇ ಜಮೀನಿನಲ್ಲಿ ಸರ್ವೆ ಕಲ್ಲುಗಳು ಇದ್ದು ನಕ್ಷೆಯಲ್ಲಿ ಷದ್ರಿ ಕಲ್ಲುಗಳನ್ನು ಎಫ್ 1 ಹಾಗೂ ಎಫ್ 11 ಎಂದು ಗುರುತಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ್ದು, ಷದ್ರಿ ದಾಖಲಾತಿಯು **ಪಂಚನಾಮೆಯಾಗಿದ್ದು,** ಅದನ್ನು **ನಿ.ಸಿ.3 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.3ಎ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ್ದು, ಷದ್ರಿ ದಾಖಲಾತಿಯು ನಕ್ಷೆ**ಯಾಗಿದ್ದು,** ಅದನ್ನು **ನಿ.ಸಿ.4 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.4ಎ ಎಂದು** ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದ ಪರ ವಕೀಲರಾದ ಶ್ರೀ.ಆರ್. ಜೆ. ಎನ್. ವಕೀಲರಿಂದಃ**

ನಾನು ಈ ಹಿಂದೆ ದಾವಾ ಆಸ್ತಿಯನ್ನು ಯಾವ ಪದ್ಧತಿಯ ಅಡಿಯಲ್ಲಿ ಆಳತೆ ಮಾಡಿರುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ. ನಾನು ಸದ್ರಿ ದಾವಾ ಆಸ್ತಿಯನ್ನು ಆಳತೆಗೆ ಹೋಗುವ ಪೂರ್ವದಲ್ಲಿ ಅದರ ಪಿ ಟಿ ಶೀಟ್ ನಲ್ಲಿ ಪಳನಿ ಪದ್ಧತಿಯಲ್ಲಿ ದಾವಾ ಆಸ್ತಿಯನ್ನು ಆಳತೆ ಮಾಡಿದ ಕುರಿತಾಗಿ ನಮೂದು ಇದ್ದು, ಅದನ್ನು ನಾನು ನೋಡಿರುತ್ತೇನೆ. ಈ ಕುರಿತಾಗಿ ನಾನು ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ. ನಾನು ಮೊಟ್ಟ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ದಾವಾ ಸ್ಥಳವನ್ನು ಪಳನಿ ಪದ್ಧತಿಯಲ್ಲಿ ಆಳತೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರ ಸರಿಯಲ್ಲ. ಈ ವಿಷಯ ನನಗೆ ಸರ್ವೆ ವರದಿಯಲ್ಲಿ ನಮೂದು ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ನಾನು ನನ್ನ ವರದಿಯಲ್ಲಿ ರಸ್ತೆಗೆ ಎಷ್ಟು ಜಾಗವು ಹೋಗಿದೆ ಎಂಬ ಬಗ್ಗೆ ನಮೂದು ಮಾಡಿರುವುದಿಲ್ಲ. ರಸ್ತೆಗೆ ಎಷ್ಟು ಜಾಗ ಹೋಗಿದೆ ಎಂದು 1991 ರ ಪ್ರಕಾರ ದ ದಾಖಲೆಯಲ್ಲಿ ನಾನು ನೋಡಿರುತ್ತೇನೆ. ನಾನು ರಸ್ತೆಗೆ ಎಷ್ಟು ವಿಸ್ತೀರ್ಣ ಹೋಗಿದೆ ಎಂಬ ಬಗ್ಗೆ ನಮೂದು ಮಾಡಿರುವುದಿಲ್ಲ.

ನಮ್ಮ ವರದಿಯಲ್ಲಿ ನಮೂದಿಸಿದ ಕ್ಷೇತ್ರಗಳಲ್ಲಿ ಪ್ರತಿವಾದಿಯರು ಕ್ರಯಕ್ಕೆ ನೀಡಿದ ಕುರಿತು ನಮ್ಮ ಕಛೇರಿಯಲ್ಲಿ ನಕ್ಷೆ ಹಾಗೂ ಈ ಕುರಿತಾಗಿ ಪಹಣಿ ಪತ್ರಿಕೆಯಲ್ಲಿ ನಮೂದು ಇದೆ. ನಾನು ಸದ್ರಿ ರಸ್ತೆಯ ಅಗಲೀಕರಣಗೊಂಡ ಬಗ್ಗೆ ಯಾವುದೇ ವಿಷಯವನ್ನು ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ. ಸದಿ ಪಿ.ಡಬ್ಲೂ.ಡಿ ರಸ್ತೆ ಎಷ್ಟು ಅಗಲ ಇದೆ ಎಂಬ ಬಗ್ಗೆ ನಮೂದು ಮಾಡಿರುವುದಿಲ್ಲ. ನಾನು ನನ್ನ ವರದಿಯಲ್ಲಿ ನಮೂದಿಸಿ ರಸ್ತೆಯು ನಾನು ಸದ್ರಿ ಜಾಗಕ್ಕೆ ಆಳತೆ ಕಾರ್ಯದಲ್ಲಿ ಆಳತೆ ಕಾರ್ಯಕ್ಕೆ ಹೋಗುಂವತಹ ಸಂದರ್ಭ ದಲ್ಲಿ ಇದ್ದ ರಸ್ತೆಯನ್ನು ನನ್ನ

ವರದಿಯಲ್ಲಿ ತೋರಿಸಿರುತ್ತೇನೆ. ನಾನು ನನ್ನ ವರದಿಯಲ್ಲಿ ಸದ್ರಿ ರಸ್ತೆಯು ಎಷ್ಟು ಅಗಲ ಇದೆ ಎಂಬ ಬಗ್ಗೆ ನಮೂದು ಮಾಡಿರುವುದಿಲ್ಲ. ನಾನು ದಾವಾ ಆಸ್ತಿಯಲ್ಲಿ ಇರುವ ರಸ್ತೆಯು ಎಷ್ಟು ಅಗಲ ಇದೆ ಎಂಬ ಬಗ್ಗೆ ನಮೂದು ಮಾಡಿಲ್ಲ. ಸದ್ರಿ ದಾವಾ ಆಸ್ತಿಯು zig zag ಆಕೃತಿಯಲ್ಲಿ ಇರುತ್ತದೆ. ಸದ್ರಿ zig zag ರಸ್ತೆಯು ಸರ್ವೆ ನಂ. 189 ರಲ್ಲಿ ಬರುತ್ತದೆ.

ನಾನು ನಕಾಶೆಯಲ್ಲಿ ಕಾಣಿಸಿದಂತಹ ರೀತಿಯಲ್ಲಿ ದಾವಾ ಸ್ಥಳದಲ್ಲಿ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 191 ರಿಂದ ಪ್ರಾರಂಭವಾದ ರಸ್ತೆಯು 188/3, 188/6, 188/1, 188/2 ರಸ್ತೆಯು 187 ರ ಮುಖಾಂತರ ಹಾದು ಹೋಗುತ್ತದೆ ಎಂದರೆ ಸರಿಯಲ್ಲ. ನಾನು ಶಕರ ಶೇಷು ನಾಯ್ಕ ಹಾಗೂ ಸದಾಶಿವ ನಾಗಪ್ಪಾ ನಾಯ್ಕ ಇವರಿಗೆ ನೊಟೀಸನ್ನು ನೀಡಿರುವುದಿಲ್ಲ. ಸರ್ವೆ ನಂ.188/5 ಸದ್ರಿ ಜಾಗವು ಶಂಕರ ಶೇಷು ನಾಯ್ಕ ಇವರಿಗೆ ಸಂಬಂಧಪಟ್ಟಿದ್ದಾಗಿದ್ದು ಹಾಗೂ ಸರ್ವೆ ನಂ. 188/3 ಸದಾಶಿವ ನಾಯ್ಕ ಇವರಿಗೆ ಸೇರಿದ್ದು, ಸದ್ರಿ ಸರ್ವೆ ನಂಬರನ ಮಾಲಿಕರಿಗೆ ನಾನು ನೋಟೀಸನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ಮಾನ್ಯ ನ್ಯಾಯಾಲಯದ ಆದೇಶದಂತೆ ವಾದಿ ಹಾಗೂ ಪ್ರತಿವಾದಿಯರಿಗೆ ನೋಟೀಸನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಸ್ಥಳಕ್ಕೆ ಹೋದ ನಂತರ ಸದ್ರಿ ಸದಾಶಿವ ನಾಯ್ಕ ಹಾಗೂ ಶಂಕರ ಶೇಷು ನಾಯ್ಕ ಇವರಿಗೆ ನೋಟೀಸನ್ನು ನೀಡಿ ಕರೆಯಿಸಲು ಸಾಧ್ಯ ಇತ್ತು ಸಾಕ್ಷಿಯು ಮುಂದುವರಿದು ಈ ಕುರಿತಾಗಿ ಮಾನ್ಯ ನ್ಯಾಯಾಲಯದಿಂದ ಆದೇಶ ಇರಲಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಅವಶ್ಯ ಇದ್ದ ವ್ಯಕ್ತಿಗಳಿಗ ನೋಟೀಸನ್ನು ನೀಡದೇ ವರದಿಯನ್ನು ತಯಾರಿಸುವ ಅಗತ್ಯತೆ ಇರಲಿಲ್ಲ.

ನಾನು ಮಾಡಿದಂತಹ ಸರ್ವೆಯು ವೈಜ್ಞಾನಿಕ ಸರ್ವೆ ಎಂದರೆ ಸರಿಯಲ್ಲ. ಜಿ.ಪಿ.ಎಸ್ ಮುಖಾಂತರ ಸರ್ವೆ ಮಾಡಿದಾಗ ಸದ್ರಿ ಸರ್ವೆಯು ಪಕ್ಕಾ ಸರ್ವೆಯಾಗಿರುತ್ತದೆ ಎಂದರೆ ಸರಿ. ನಮ್ಮ

ಇಲಾಖೆಯಲ್ಲಿ ಅಧುನಿಕ ಉಪಕರಣಗಳು ಸರ್ವೆ ಮಾಡಲು ಲಭ್ಯವಿಲ್ಲದೇ ಇರುವುದರಿಂದ ನಾವು ಪಳನಿ ಪದ್ಧತಿ ಹಾಗೂ ಸಮತಲ ಮೇಜು ಪದ್ದತಿಯನ್ನು ಉಪಯೋಗಿಸುತ್ತೇವೆ. 2019 ರಲ್ಲಿ ಕುಮಟಾ ತಾಲೂಕಿನ ಕಂದಾಯ ಇಲಾಖೆಗೆ ಜಿ ಪಿ ಎಸ್ ಸರ್ವೆ ಬಂದಿದೆ ಎಂದರೆ ಸರಿಯಲ್ಲ. ವಾದಿಗೆ ಅನುಕೂಲವಾಗುವ ದೃಷ್ಟಿಯಿಂದ ಅಧುನಿಕ ಪದ್ಧತಿಯನ್ನು ಉಪಯೋಗಿಸದೇ ಸರ್ವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಭೂ ಸುಧಾರಣೆ ಕಾಯ್ದೆ ಬರುವ ಪೂರ್ವದಲ್ಲಿ ಮಾಡಿದ ನಕ್ಷೆಗ ನಾನು ತಯಾರಿಸಿದ ನಕ್ಷೆಗೂ ಅಜಗಜಾಂತರ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

ವಿಷ್ಣು ಜಟ್ಟು ಗೌಡಾ ಇವರು ನಾನು ನನ್ನ ವರದಿಯಲ್ಲಿ ತೋರಿಸಿದಂತಹ ಜಾಗವನ್ನು ಅತೀಕ್ರಮಣ ಮಾಡಲಿಲ್ಲ ಎಂದರೆ ಸರಿಯಲ್ಲ. ಶಂಕರ ಶೇಷು ನಾಯ್ಕು, ಸದಾಶಿವ ನಾಗಪ್ಪಾನಾಯ್ಕ ಇವರ ಅನುಪಸ್ಥಿತಿಯಲ್ಲಿ ನಾನು ವಾದಿಗೆ ಸಹಾಯ ಮಾಡುವ ರೀತಿಯಲ್ಲಿ ಈ ವರದಿಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಜಾಗ ಖಾಲಿ ಜಾಗ ಇದ್ದು ಪ್ರತಿವಾದಿಯರ ಜಾಗದಲ್ಲಿ ತೆಂಗು ಹಾಗೂ ಅಡಿಕೆ ಮರಗಳು ಹಾಗೂ ಬೋರವೆಲ್ ಇದೆ ಎಂದರೆ ಸರಿ. ಸದ್ರಿ ಮರಗಳು 5-6 ವರ್ಷದ ಹಳೇಯ ಮರಗಳಾಗಿರುತ್ತವೆ. ನಾನು ಮಾಡಿದ ಸರ್ವೆಯು ಸರಿ ಇಲ್ಲ ಎಂಬ ಕಾರಣದಿಂದಾಗಿ ಜಿಲ್ಲಾ ಭೂಮಾಪನ ಅಧಿಕಾರಿಗಳಿಂದ ಸರ್ವೆ ಮಾಡಿಸಬೇಕು ಎಂದು ಅರ್ಜಿಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಮಾಡಿದ ಸರ್ವೆಯು ವೈಜ್ಞಾನಿಕ ಸರ್ವೆ ಅಲ್ಲ ಎಂದರೆ ಸರಿಯಲ್ಲ. ನಾನು ಸದ್ರಿ ವರದಿಯಲ್ಲಿ ರಸ್ತೆಗೆ ಎಷ್ಟು ಜಾಗ ಹೋಗಿದೆ ಎಂದು ನಮೂದು ಮಾಡದೇ ಇರುವುದರಿಂದ ಸರಿಯಾಗಿ ವರದಿಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ, ನಾನು ಪಹಣಿ ಪತ್ರಿಕೆಗೆ ಸರಿತೂಗಬೇಕು ಎಂಬ ಉದ್ದೇಶದಿಂದ ಈ ವರದಿಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಅತೀಕ್ರಮಣ ಎಂದು ತೋರಿಸಿದ ಜಾಗವನ್ನು

ಪ್ರತಿವಾದಿಯರು ಅತೀಕ್ರಮಿಸದೇ ಸದ್ರಿ ಜಾಗವು ರಸ್ತೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಜಾಗವನ್ನು ಆಳತೆ ಮಾಡಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ